ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ9/3707/06-07 ಸಂ-2

ದಿನಾಂಕ : 8 MAR 2022

## ಅಧಿಕೃತ ಜ್ಞಾಪನ

**ವಿಷಯ:-** ಕವಿಪ್ರನಿನಿಯ ಪ್ರಸರಣ ಮಾರ್ಗಗಳು ಹಾಗೂ ಉಪಕೇಂದ್ರಗಳ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳಿಗೆ ಸಂಬಂಧಿಸಿದಂತೆ ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ ರವರ ಎಂಪ್ಯಾನಲ್‌ಮೆಂಟ್ ನವೀಕರಣದ ಬಗ್ಗೆ.

**ಉಲ್ಲೇಖ:-**
1. ಕವಿಪ್ರನಿನಿ/ಬಿ9/3707/06-07 ದಿನಾಂಕ 17/04/2012.
2. ಕವಿಪ್ರನಿನಿ/ಬಿ9/3707/06-07 ದಿನಾಂಕ 16/09/2014.
3. ಕವಿಪ್ರನಿನಿ/ಬಿ9/3707/06-07/ಸಂ-2 ದಿನಾಂಕ 22/11/2018.
4. ಕವಿಪ್ರನಿನಿ/ಬಿ9/3707 (34)/06-07 ದಿನಾಂಕ 23/11/2018.
5. ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ ರವರ ಪತ್ರ ದಿನಾಂಕ 21/10/2021 ಮತ್ತು 07/02/2022.
6. ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ 05/03/2022.

**ಪೀಠಿಕೆ:**

ಉಲ್ಲೇಖ (3) ರ ನಿಗಮ ಕಾರ್ಯಾಲಯದ ಅಧಿಕೃತ ಜ್ಞಾಪನದಲ್ಲಿ ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ ರವರನ್ನು ಕವಿಪ್ರನಿನಿಯಲ್ಲಿ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳಿಗೆ ದರ್ಜೆ-1 ವರ್ಗದಲ್ಲಿ ಎಂಪ್ಯಾನಲ್ ಮಾಡಿಕೊಳ್ಳಲಾಗಿತ್ತು. ಸದರಿ ಅಧಿಕೃತ ಜ್ಞಾಪನದನ್ವಯ ಎಂಪ್ಯಾನಲ್‌ಮೆಂಟ್ ನ್ನು 3 ವರ್ಷಗಳ ಅವಧಿಗೆ ಮಾಡಲಾಗಿದ್ದು, ಸದರಿ ಅವಧಿ ದಿನಾಂಕ 21/11/2021 ರಂದು ಮುಕ್ತಾಯಗೊಂಡಿತ್ತು.

ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ ರವರು ತಮ್ಮ ದರ್ಜೆ-1 ವರ್ಗದಲ್ಲಿನ ಎಂಪ್ಯಾನಲ್‌ಮೆಂಟ್ ಅವಧಿಯನ್ನು ನವೀಕರಿಸಲು ಕೋರಿದ್ದರು. ಈ ಸಂಬಂಧ, ಸದರಿಯವರ ನವೀಕರಣದ ಕೋರಿಕೆಯನ್ನು ಪರಿಗಣಿಸಲು, ಎಲ್ಲಾ ಪ್ರಸರಣ ವಲಯಗಳ ಮುಖ್ಯ ಇಂಜಿನಿಯರ್ (ವಿ) ರವರುಗಳಿಗೆ ಸದರಿ ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ನಿರ್ವಹಿಸಿದ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳ ಬಗ್ಗೆ ಗೌಪ್ಯ ವರದಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಸದರಿ ಸಂಸ್ಥೆ ತುಮಕೂರು ಪ್ರಸರಣ ವಲಯ ವ್ಯಾಪ್ತಿಯಲ್ಲಿ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳನ್ನು ನಿರ್ವಹಿಸಿರುವುದಾಗಿ ತಿಳಿಸಿದ್ದರು. ಈ ಸಂಬಂಧ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರು ಸಲ್ಲಿಸಿದ್ದ ಗೌಪ್ಯ ವರದಿಯಲ್ಲಿ ಸದರಿ ಸಂಸ್ಥೆಯ ದರ್ಜೆ-1 ವರ್ಗದಡಿಯಲ್ಲಿನ ಎಂಪ್ಯಾನಲ್‌ಮೆಂಟನ್ನು ನವೀಕರಿಸಬಹುದೆಂದು ಶಿಫಾರಸ್ಸು ಮಾಡಿದ್ದರು.

ಮೇಲಿನ ಶಿಫಾರಸ್ಸಿನ ಮೇರೆಗೆ ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸ್‌ಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ ರವರ ದರ್ಜೆ-1 ವರ್ಗದಲ್ಲಿನ ಎಂಪ್ಯಾನಲ್‌ಮೆಂಟನ್ನು ನವೀಕರಿಸುವ ಸಂಬಂಧದ ಪ್ರಸ್ತಾವನೆಗೆ ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ 05/03/2022 ರಲ್ಲಿ ಅನುಮೋದನೆ ಪಡೆಯಲಾಗಿತ್ತು. ಆದ ಕಾರಣ ಈ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದೆ.

**ಆದೇಶ:**

ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸ್‌ಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ ರವರನ್ನು ಕವಿಪ್ರನಿನಿಯಲ್ಲಿನ ಪ್ರಸರಣ ಮಾರ್ಗಗಳು ಹಾಗೂ ಉಪಕೇಂದ್ರಗಳ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳಿಗೆ ದರ್ಜೆ-1 ವರ್ಗದಲ್ಲಿ ಮಾಡಿಕೊಳ್ಳಲಾದ ಎಂಪ್ಯಾನಲ್‌ಮೆಂಟನ್ನು ದಿನಾಂಕ 22/11/2021 ರಿಂದ ಅನ್ವಯವಾಗುವಂತೆ ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸಲು ಅನುಮೋದನೆ ನೀಡಲಾಗಿದೆ. ಸದರಿ ಅನುಮೋದನೆ ಉಲ್ಲೇಖದಲ್ಲಿನ ನಿಗಮದ ಆದೇಶದಲ್ಲಿ ನಿಗಧಿಪಡಿಸಿದ ನಿಯಮಗಳು ಮತ್ತು ಷರತ್ತಿಗೊಳಪಟ್ಟಿರುತ್ತದೆ.

| ಸಂಸ್ಥೆಯ ಹೆಸರು | ನೋಂದಾಯಿತ ಕಚೇರಿ/ ಪತ್ರ ವ್ಯವಹಾರಕ್ಕಾಗಿ ವಿಳಾಸ | ಎಂಪ್ಯಾನಲ್ ಮೆಂಟ್ ದರ್ಜೆ | ಸಿಂಧುತ್ವದ ಅವಧಿ |
|---|---|---|---|
| ಮೆ॥ ಶಾಂತಿನಿಕೇತನ್ ಇಂಜಿನಿಯರಿಂಗ್ ಕನ್ಸ್‌ಲ್‌ಟೆಂಟ್ ಮತ್ತು ಕಾಂಟ್ರ್ಯಾಟರ್ಸ್, ದಾವಣಗೆರೆ. | # 202/269, 2 ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ಆಶೋಕ ನಗರ, ದಾವಣಗೆರೆ-577 006 | ದರ್ಜೆ-1 | 21/11/2024 |

B.R 8/3/22

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕವಿಪ್ರನಿನಿ.
4. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ನಿಗಮದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
6. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ),ಬೃ.ಕಾ / ಟಿಎಲ್ ಮತ್ತು ಎಸ್ ಎಸ್ ವಿಭಾಗಗಳು, ಕವಿಪ್ರನಿನಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ.
9. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವೃತ್ತ, ಕವಿಪ್ರನಿನಿ.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ (ಹಣಕಾಸು)/ (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.